# 43

# ಭಿನ್ನಾಭಿಪ್ರಾಯಗಳನ್ನು ಶಮನ ಮಾಡುವದಕ್ಕಾಗಿ ಹೆಚ್ಚಿನ ಸಲಹೆಗಳು

## (15:13-35)

ಭಿನ್ನಾಭಿಪ್ರಾಯವು ಅಂತಿಯೋಕ್ಯ ಸಭೆಯಲ್ಲಿ ತನ್ನ ಕೆಟ್ಟದಾದ ತಲೆಯನ್ನು ಬೆಳೆಸಿತ್ತು. ಅನ್ಯರು ಸಹ ಸುನ್ನತಿ ಮಾಡಿಸಿಕೊಳ್ಳಬೇಕು ಎಂಬ ಅಭಿಪ್ರಾಯದಿಂದ ಸಹೋದರರು ಯೇರೂಸಲೇಮಿಗೆ ಬಂದಿದ್ದರು ಮತ್ತು ಮೋಶೆಯ ನೇಮಗಳನ್ನು ಪಾಲಿಸಬೇಕೆಂದು ಹೇಳಿದ್ದರು. ಇದು ಕ್ಲಿಷ್ಟಕರವಾದ ಕ್ಷಣವಾಗಿತ್ತು. ಭಿನ್ನಾಭಿಪ್ರಾಯವನ್ನು ಯೋಗ್ಯರೀತಿಯಲ್ಲಿ ಪರಿಹರಿಸದಿದ್ದರೆ, ಸಭೆಯು ಇಬ್ಭಾಗವಾಗುವ ಸಾಧ್ಯತೆಯಿತ್ತು - ಯೆಹೂದ್ಯ ಕ್ರೈಸ್ತರು ಒಂದು ಕಡೆ ಮತ್ತು ಅನ್ಯ ಜನರಾದ ಕ್ರೈಸ್ತರು ಇನ್ನೊಂದು ಕಡೆ. ಪೌಲ ಬಾರ್ನಬರು ಬಹು ಬೇಗನೆ ಬೇರಸ ಕೊಳ್ಳಗಾಗುತ್ತಿದ್ದರು. ಒಂದು ವೇಳೆ ಅವರು, "ಯೆಹೂದ್ಯ ಕ್ರೈಸ್ತರ ಅಭಿಪ್ರಾಯನ್ನು ಶಮನ ಮಾಡುವಲ್ಲಿ ಬೇಸರಗೊಂಡು; ಪಟ್ಟಣದ ಇನ್ನೊಂದು ಕಡೆ ಅನ್ಯ ಕ್ರೈಸ್ತರಿಗಾಗಿ ಸಭೆಯನ್ನು ಸ್ಥಾಪಿಸುವೆವು ಎಂದು ಹೇಳಬಹುದಿತ್ತು!" ಆದರೆ ಅವರು ಈ ಆಲೋಚನೆಯನ್ನು ಮಾಡದೇ, ವ್ಯತ್ಯಾಸಗಳಿಗೆ ಪರಿಹಾರ ಕಂಡುಕೊಳ್ಳುವದಕ್ಕೆ ಯೆರೂಸಲೇಮಿಗೆ ಹೋದರು.

ಅಪೊಸ್ತಲರ ಕೃತ್ಯಗಳು 15:1-35ರವರೆಗಿನ ಅಭ್ಯಾಸವನ್ನು ಮುಂದುವರಿಸಿ ಭಿನ್ನಾಭಿಪ್ರಾಯಗಳ ಕುರಿತ ನಿಯಮಗಳನ್ನು ಕಂಡುಕೊಳ್ಳೋಣ. ಪೌಲ ಬಾರ್ನಬರಂತೆ ಐಕಮತ್ಯಕ್ಕಾಗಿ ಶ್ರಮಿಸೋಣ (ಮತ್ತಾಯ 5:9).

### ಪುಸ್ತಕಕ್ಕೆ ಸಮೀಪಸ್ಥರಾಗಿರ್ರಿ (15:13-19)

ಯಾಕೋಬನ ಮಾತುಗಳ ಮಧ್ಯದಲ್ಲಿ ನಮ್ಮ ಹಿಂದಿನ ಪಾಠವನ್ನು ನಿಲ್ಲಿಸಿದ್ದೆವು, ಭಿನ್ನಾಭಿಪ್ರಾಯ ಉಂಟಾಗುವಾಗ, ನಾವುಗಳು ದೇವ ವಾಕ್ಯಕ್ಕೆ ಸಮೀಪರಾಗಿರಬೇಕು. ನಮ್ಮ ಅಭಿಪ್ರಾಯಗಳು ಏನೇ ಆಗಿದ್ದರೂ, ಅದನ್ನು ಒತ್ತಿ ಹೇಳಲಾಗುವದಿಲ್ಲ, ಅದು ದೇವರ ವಾಕ್ಯಕ್ಕೆ ಅನುಗುಣವಾಗದಿದ್ದರೆ, ಅದು ದೇವರನ್ನು ಮೆಚ್ಚಿಸಲಾರದು.

ಅಪೊಸ್ತಲರ ಕೃತ್ಯಗಳು 9:11, 12ರ ಹೇಳಿಕೆಯನ್ನು ಯಾಕೋಬನು ತಿಳಿಸಿ, ಕೊರ್ನೇಲಿಯನ ಮತ್ತು ಅವನ ಸಂಗಡಿಗರ ಪರಿವರ್ತನೆಯು, ಈ ಪ್ರವಾದನೆಯ ನೆರವೇರಿಕೆ ಎಂದನು. ಆ ವಾಕ್ಯದ ಹೇಳಿಕೆಯಂತೆ ಮುಂದುವರೆದ ಯಾಕೋಬನ ಸಂದೇಶವನ್ನು ಗಮನಿಸೋಣ:

> ಹೇಗಂದರೆ - ಇದಾದ ಮೇಲೆ ನಾನು ಹಿಂತಿರುಗಿ ಬಂದು ದಾವೀದನ ಬಿದ್ದುಹೋಗಿರುವ ಗುಡಾರವನ್ನು ಎತ್ತುವೆನು. ಅದರಲ್ಲಿ ಹಾಳಾದದ್ದನ್ನು ನಾನು ಸರಿಮಾಡಿಸಿ ಅದನ್ನು ನೆಟ್ಟಗೆ ನಿಲ್ಲಿಸುವನೆನು. ಮನುಷ್ಯ[1] ಜಾತಿಯ ಉಳಿದ ಜನಗಳೂ ಅಂದರೆ ದೇವಜನರೆನಿಸಿಕೊಳ್ಳುವ ಸಕಲ ಜನಾಂಗಗಳೂ[2] ಕರ್ತನನ್ನು ಹುಡುಕುವವರಾಗಿರಬೇಕೆಂದು ಆದಿಯಿಂದ ಈ ಕಾರ್ಯಗಳನ್ನು ತಿಳಯಪಡಿಸುವ ಕರ್ತನು ನುಡಿಯುತ್ತಾನೆ ಎಂದು ಬರೆದದೆ (15:16-18).[3]

ದಾವೀದನ ರಾಜ್ಯವನ್ನು ಪುನಃ ಸ್ಥಾಪಿಸುವ ಪ್ರವಾದನೆಯಾಗಿದೆ - ಅದು ಯೇಸು[4] ಎದ್ದಹೋಗಿ, ಮಹಿಮೆಹೊಂದಿದ ವಿಷಯದಲ್ಲಿ ಅಡಕವಾಗಿದೆ - ಮನುಷ್ಯ ಜಾತಿಯ ಉಳಿದ ಜನಗಳು, ಅಂದರೆ ಮುಖ್ಯವಾಗಿ ಅನ್ಯರೆಲ್ಲರೂ ಕರ್ತನನ್ನು ಹುಡುಕುವರು ಕ್ರೈಸ್ತ ಯುಗದಲ್ಲಿ ದೇವರು ಅನ್ಯರನ್ನು ತನ್ನ ಯೋಜನೆ ಹಾಗೂ ಉದ್ದೇಶದಲ್ಲಿ ಸೇರ್ಪಡೆ ಮಾಡಿದನೆಂದು ಯಾಕೋಬನು ರುಜುವಾತು ಮಾಡಿದನು.

ಆದರೆ ಸುನ್ನತಿ ಮಾಡಿಸಿಕೊಳ್ಳಬೇಕು ಅಥವಾ ಮಾಡಿಸಿಕೊಳ್ಳಬಾರದು ಎಂಬ ವಿಷಯಕ್ಕೆ ಇದು ಹೇಗೆ ಸಂಬಂಧ ಪಡುತ್ತದೆ? ಮತ್ತು ನೇಮಗಳನ್ನು ಕಾಪಾಡಬೇಕು ಎಂಬ ವಿಷಯದಲ್ಲಿ ಯಾಕೋಬನ ನಿರ್ಣಯವು ಮೌನವಾಗಿದೆ: ಅನ್ಯರೆಲ್ಲರೂ ದೇವರ ಯೋಜನೆಯಲ್ಲಿರುವರು ಎಂದು ಆಮೋಸನು ಒತ್ತಿ ಹೇಳಿರುವನು, ಆದರೆ ಅನ್ಯರೆಲ್ಲರೂ ಯೆಹೂದ್ಯರ ನೇಮಗಳನ್ನು ಪಾಲಿಸಬೇಕೆಂದು ಯಾವ ಪ್ರವಾದಿಗಳು ತಿಳಿಸಿರುವದಿಲ್ಲ. ಅದು ದೇವರ ಯೋಜನೆಯ ಒಂದು ಭಾಗವೆಂದು ಸಹ ಹೇಳಿರುವದಿಲ್ಲ. ಯಾಕೋಬನು ತನ್ನ ಮಾತನ್ನು ಅಂತ್ಯಗೊಳಿಸುವಾಗ, "ಹೀಗಿರಲಾಗಿ ನನ್ನ ಅಭಿಪ್ರಾಯವೇನೆಂದರೆ - ಅನ್ಯಜನರಲ್ಲಿ ದೇವರ ಕಡೆಗೆ ತಿರುಗಿಕೊಳ್ಳುವವರನ್ನು ತೊಂದರೆ ಪಡಿಸಬಾರದು" (ವಚನ 19)[5] ಎಂದು ಹೇಳಿದನು. ನಮ್ಮ ಹಿಂದಿನ ಪಾಠದಲ್ಲಿ ತಿಳಿಸಿರುವಂತೆ "ಅನ್ಯರು ಸುನ್ನತಿ ಮಾಡಿಸಿಕೊಂಡು ನೇಮಗಳನ್ನು ಪಾಲಿಸಬೇಕು ಎಂಬ ಭಾರವನ್ನು ಅವರ ಮೇಲೆ ಹೊರಿಸಬಾರದು."

## ಇತರರ ಭಾವೋದ್ವೇಗವನ್ನು ಸೂಕ್ಷ್ಮವಾಗಿ ತಿಳಿಯಿರಿ (15:20, 21)

ಆದ್ದರಿಂದ, ಇದೇ ಆ ಮಾರ್ಗ ಎಂದು ಯಾಕೋಬನು ಪ್ರಕಟಿಸದೆ, "ಹೀಗಿರಲಾಗಿ ಇದು ನನ್ನ ಅಭಿಪ್ರಾಯ ಮಾಡಬೇಕಾದದ್ದನ್ನೇ ಮಾಡೋಣ" ಎಂದು ಹೇಳಿ, "ಸಭೆಯು ಈ ನಿರ್ಣಯವನ್ನು ಮಾಡಬೇಕೆಂದು ಒತ್ತಾಯಪಡಿಸಲಿಲ್ಲ; ವಿರೋಧ ವ್ಯಕ್ತ ಪಡಿಸಿದವರನ್ನೂ ಗೌರವಿಸಿದನು," ಅವರು ಆ ಗೌರವಕ್ಕೆ ಪಾತ್ರರಾಗಬೇಕೆಂದು ಅವಕಾಶವನ್ನು ನೀಡಿದನು. ಅವರೆಲ್ಲರ ಭಾವೋದ್ವೇಗವನ್ನು ಸೂಕ್ಷ್ಮವಾಗಿ ತಿಳಿಯುವದನ್ನು ಈ ಕಥೆಯಲ್ಲಿ ಮುಂದುವರಿಸಲಾಗಿದೆ.

ಪ್ರಾಯೋಗಿಕವಾದ ಉದ್ದೇಶದಿಂದ, ಸಿದ್ಧಾಂತದಂತೆ ಸಮಸ್ಯೆಯನ್ನು ಬಗೆ ಹರಿಸಲಾಯಿತು; ಪೇತ್ರ, ಪೌಲ, ಬಾರ್ನಬ ಹಾಗೂ ಯಾಕೋಬರು ಒಂದೇ ನಿರ್ಣಯಕ್ಕೆ ಬಂದಿದ್ದರು. ಇನ್ನೊಂದು ಸಮಸ್ಯೆಯನ್ನು ನಿಶ್ಚಯವಾಗಿ ಎದುರಿಸಬೇಕಿತ್ತು - ಅದು ಸಹ ಸಮಸ್ಯೆಯ ಒಂದು ಭಾಗವಾಗಿತ್ತು; ನೇಮಗಳನ್ನು ಪಾಲಿಸಿಕೊಂಡು ಬಂದಿದ್ದ ಯೆಹೂದ್ಯರು, ನೇಮಗಳನ್ನು ಪಾಲಿಸದೇ ಇರುವ ಅನ್ಯರೊಂದಿಗೆ ಇಜ್ಜೋಡಾಗುವದು ಸಾಧ್ಯವೇ? ಎಂಬ ಸಮಸ್ಯೆಯನ್ನು ಎದುರಿಸಬೇಕಿತ್ತು. ಯಾಕೋಬನು ತನ್ನ ಮಾತುಗಳನ್ನು ಅಂತ್ಯಗೊಳಿಸುವಾಗ, ಒಂದು ಸೂಕ್ತ ನಿರ್ಣಯವನ್ನು ಮಾಡಿ. "ಆದರೆ ವಿಗ್ರಹಕ್ಕೆ ನೈವೇಧ್ಯಮಾಡಿದ್ದನ್ನು ಹಾದರವನ್ನು ಕುತ್ತಿಗೆ ಹಿಸುಕಿ ಕೊಂದದ್ದನ್ನೂ ರಕ್ತವನ್ನೂ ವಿಸರ್ಜಿಸಬೇಕೆಂದು ನಾವು ಅವರಿಗೆ ಕಾಗದವನ್ನು ಬರೆದು ಅಪ್ಪಣೆಕೊಡೋಣ ಎಂದನು" (ವಚನ 20).

ವಚನ 20ರ ಕೊನೆಯ ಎರಡು ಅಂಶವನ್ನು, ಅಲ್ಲಿದ್ದವರೆಲ್ಲರೂ ಸಮ್ಮತಿಸಿದರು: ಅದರಲ್ಲಿ ಯಾಕೋಬನು ಮೂರು ಸಂಗತಿಗಳ ನಿಷೇದವನ್ನು ತಿಳಿಸಿದನು "ವಿಗ್ರಹಗಳಿಗೆ ನೈವೇದ್ಯ ಮಾಡಿರುವದು" ಮೊದಲನೆಯದು. ನಂತರ "ವಿಗ್ರಹಗಳಿಗೆ ಮೀಸಲಾದದ್ದನ್ನು ಎಂದು ತಿಳಿಸಿ" (ವಚನ 29), ಅನ್ಯರ ವೇದಿಗಳಲ್ಲಿ ಮಾಡಿದ ಯಜ್ಞಗಳು ಎಂದು ಸಹ ತಿಳಿಸಲಾಗಿದೆ. ಮಾಂಸದ ಒಂದು ತುಂಡನ್ನು ಮಾತ್ರ ವೇದಿಯಲ್ಲಿ ಯಜ್ಞಮಾಡಲಾಗುತ್ತಿತ್ತು. ಉಳಿದ ಭಾಗವನ್ನು ಅನ್ಯರ ಪೂಜಾರಿ ಅಥವಾ ಪೂಜೆ ಮಾಡುವವನು ಭುಜಿಸುತ್ತಿದ್ದರು. ಅದರಲ್ಲಿ ಕೆಲವು ಭಾಗವನ್ನು ಸಾರ್ವಜನಿಕವಾಗಿ ಮಾರುತ್ತಿದ್ದರು, ಅದು ಉತ್ತಮವಾದ ಗುಣಮಟ್ಟವನ್ನು ಹೊಂದಿದ್ದರಿಂದ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿತ್ತು. ಅನ್ಯರು ತಮ್ಮ ಜೀವನ ಕಾಲವೆಲ್ಲಾ

ಅದನ್ನು ಊಟ ಮಾಡುತ್ತಾ ಬಂದಿದ್ದರು - ಆದರೆ ಯೆಹೂದ್ಯ ಕ್ರೈಸ್ತರು ಇದರಿಂದ ದೂರವಾಗಿದ್ದರು - ಅದನ್ನು ಮಾಡುವದು ಅವರಲ್ಲಿ ನಿಷೇದಿಸಲಾಗಿತ್ತು. "ಹಾದರವು" ನಿಷೇದಗೊಂಡ ಎರಡನೆಯ ವಿಷವಾಗಿತ್ತು.[6] ಹಾದರವನ್ನು ದೇವರು ಯಾವಗಲೂ ಖಂಡಿಸುತ್ತಾರೆ, ಆದರೆ ಅನ್ಯರು[7] ಅದನ್ನು ಅಪಾಯಕಾರಿಯಲ್ಲದ ಸಂಗತಿ ಎಂದು ಪರಿಗಣಿಸಿದ್ದರು. ಆದ್ದರಿಂದ ಅವರಿಗೆ ಈ ಕುರಿತು ಉಪದೇಶದ ಅಗತ್ಯವಿತ್ತು. ಹಾದರದ ಕುರಿತು ಸೆನೇಕನು ಬರೆದು, "ಇದನ್ನು ಅಪರೂಪದ ಮುಗ್ದತೆ; ಅದರ ಇರುವಿಕೆಯು ಇರುವದಿಲ್ಲ."[8]

"ಕುತ್ತಿಗೆ ಹಿಸುಕಿ ಕೊಂದದ್ದನ್ನು ಭುಜಿಸುವುದು" ನಿಷೇದದ ಮೂರನೆಯ ಅಂಶ. ನಂತರ ಶತಮಾನದ ವಿವರಣೆಕಾರರು "ರಕ್ತ" ಎಂಬದನ್ನು "ಕೊಲೆ" ಎಂದು ಕರೆದರು, ಆದರೆ ಅಪೊಸ್ತಲರ ಕೃತ್ಯಗಳು 15ರಲ್ಲಿ "ಕುತ್ತಿಗೆ ಹಿಸುಕಿ ಕೊಂದದ್ದರ ರಕ್ತ" ಎಂದು ತಿಳಿಸಲಾಗಿದೆ. ಮಾಂಸದೊಂದಿಗೆ, ರಕ್ತವನ್ನು ಸೇವಿಸುವ ಪದ್ದತಿಯು ಅನ್ಯರಲ್ಲಿತ್ತು. ಅದು ರಕ್ತವನ್ನೇ ಕುಡಿಯುವ[9] ಸೂಚನೆಯಾಗಿತ್ತು. ಒಬ್ಬ ಯೆಹೂದಿಯು ಒಂದು ಪ್ರಾಣಿಯನ್ನು ಕೊಂದಾಗ, ಅದರ ರಕ್ತವನ್ನು ಸಂಪೂರ್ಣವಾಗಿ ಅದರಿಂದ ತೆಗೆದುಬಿಡುತ್ತಿದ್ದನು,[10] ಆ ರಕ್ತವನ್ನು ನೆಲದ ಅಥವಾ ವೇದಿಯ[11] ಮೇಲೆ ಚೆಲ್ಲುತ್ತಿದ್ದನು (ಯಾಜಕಕಾಂಡ 17:10-14; ಧರ್ಮೋಪದೇಶಕಾಂಡ 12:16, 23-25) - "ರಕ್ತವು ಜೀವಾಧಾರವಾಗಿರುವದರಿಂದ ಭುಜಿಸಲೇಬಾರದು" ಎಂದು ದೇವರು ಬೋಧಿಸಿದ್ದನು (ಯಾಜಕಕಾಂಡ 17:11). ಅನ್ಯರ ಸಿದ್ಧಪಡಿಸಿದ ಆಹಾರದಲ್ಲಿ ಈ ವಿಷಯವು ಅಡಗಿರಬಹುದೆಂಬ ಸಂದೇಹವು ಯೆಹೂದ್ಯನ ಮನಸ್ಸಿನಲ್ಲಿ ಇರುತ್ತಿತ್ತು.

ಯಾಕೋಬನು ಈ ಮೂರು ವಿಷಯಗಳನ್ನು ಪ್ರತ್ಯೇಕಪಡಿಸಿ, ಏಕೆ ನಿಷೇದಿಸಿದನು ಎಂದು ನಾವು ಅರಿಯೆವು, ಆದರೆ ಕೆಲವು ತಿಳುವಳಿಕೆಯ ಊಹೆಗಳನ್ನು ಮಾಡಬಹುದು: ಮೊದಲನೆಯದಾಗಿ, ಇವುಗಳು ಅನ್ಯರಲ್ಲಿ ಸಹಜವಾದ ಆಚರಣೆಗಳಾಗಿದ್ದರಿಂದ, ಈ ನಿಷೇದಗಳನ್ನು ಮಾಡಲಾಯಿತು, ಕ್ರೈಸ್ತರಾದ[12] ಅನ್ಯರ ಜೀವಿತದಲ್ಲಿ ಇದು ಮುಂದುವರಿಯಬಹುದೆಂಬ ಸಂದೇಹವಿತ್ತು, ಅದರ ಕುರಿತು ಅವರಿಗೆ ಉಪದೇಶದ ಅಗತ್ಯವಿತ್ತು. ಎರಡನೆಯದಾಗಿ, ಈ ಮೂರು ನಿಷೇದಗಳು, ಸಭೆಯಲ್ಲಿನ ಯೆಹೂದ್ಯ ಮತ್ತು ಅನ್ಯರ ಆಚರಣೆಗಳಿಗೆ ಪರಿಣಾಮ ಬೀರಿತು. ಆ ಮೂರರಲ್ಲಿ, ಎರಡು ಅಂಶಗಳು "ದೇವರ ಕುಟುಂಬದಲ್ಲಿನ[13] ಊಟದ ಮೇಜಿನ ಆಚರಣೆಗೆ ಪರಿಣಾಮ ಬೀರಿತು." ಈ ಮೂರು ನಿಷೇದಗಳು, ಹಾದರ, ವಿಗ್ರಹಾರಾದನೆ, ರಕ್ತವನ್ನು ಭುಜಿಸುವದು ಯೆಹೂದ್ಯರಲ್ಲಿ ಮಾತ್ರ ಇರದೆ ಮೋಶೆಯ ಮೂಲಕ ನೀಡಿದ ಧರ್ಮಶಾಸ್ತ್ರದ[14] ಸಮಯಕ್ಕಿಂತ ಮೊದಲೆ ಇದ್ದ ತಪ್ಪುಗಳಾಗಿದ್ದವು - ಜಲಪ್ರಳಯದ ನಂತರ, ಈ ತಪ್ಪುಗಳನ್ನು ಅನ್ಯರ ಮೇಲೆ ಹೊರಿಸಲಾಯಿತು, ಆದ್ದರಿಂದ ಯಾಕೋಬನು, ಅನ್ಯರು ನೇಮಗಳನ್ನು ಪಾಲಿಸುವ ಅಗತ್ಯತೆ ಇಲ್ಲವೆಂದು ಹೇಳುವಾಗ, ಈ ಮೂರು ಆಚರಣೆಗಳನ್ನು ಅವರು ಹೊಂದಿರಬಾರದು ಎಂದು ಅವರನ್ನು ಬೇಡಿಕೊಂಡನು.

ಇದರ ಪರಿಣಾಮವಾಗಿ ಯಾಕೋಬನು ಕ್ರೈಸ್ತರಾದ ಅನ್ಯರಿಗೆ, "ಅನ್ಯರು ನೇಮಗಳನ್ನು ಪಾಲಿಸುವ ಕುರಿತು ನಿಮ್ಮ ಪರವಾಗಿ ಯೆಹೂದ್ಯರಾದ *ನಾವುಗಳು* ನಿರ್ಣಯವನ್ನು ತೆಗೆದು ಕೊಂಡಿದ್ದೇವೆ," ಆದ್ದರಂದ ಈ ಅನ್ಯರಾದ ನಾವುಗಳು, ಈ ಮೂರು ಕಾರ್ಯಗಳನ್ನು ಮಾಡದೆ, ನಮ್ಮನ್ನು ಸಂತೃಸುವಿಕೆಯಲ್ಲಿ ಇರಿಸುವ ಒಳ್ಳೆಯ ಕಾರ್ಯವನ್ನು ಮಾಡಬೇಕು, ನಾವು ಸಭೆಯವರೊಂದಿಗೆ ಸಮ್ಮತಿಸದೆ ಇರುವಾಗ, ಅವರ ಮನೋಭಾವದ ಕುರಿತು ತೀಕ್ಷತೆಯನ್ನು ಹೊಂದಿರಬೇಕು.

ತೀಕ್ಷಣ ಮನೋಭಾವದ ಕುರಿತು ಇನ್ನೊಂದು ಮಾತನ್ನು ಹೇಳಿ ಯಾಕೋಬನು ಅಂತ್ಯಗೊಳಿಸಿದನು: ಅನ್ಯರು ನೇಮಗಳನ್ನು ಪಾಲಿಸಬೇಕೆಂಬ ಹೊರೆಯನ್ನು ಹೊರಿಸುವಾಗ, ಯೆಹೂದ್ಯರು, ಈ ಹಿಂದೆ ಮೋಶೆಯು ಬೋಧಿಸಿದ್ದ ವಿಚಾರಗಳನ್ನು ಅರಿತಿದರಾಗಿದ್ದರು. ಅವರು

ಆ ವಿಷಯದಲ್ಲಿ ಚಿಂತಿಸಬಾರದೆಂದು ಯಾಕೋಬನು ಹೇಳಿದನು: "ಯಾಕಂದರೆ ಪುರಾತನ ಕಾಲದಿಂದ ಎಲ್ಲಾ ಪಟ್ಟಣಗಳಲ್ಲಿ ಮೋಶೆಯ ಗ್ರಂಥವನ್ನು ಬೋಧಿಸುವವರು ಇದ್ದಾರೆ; ಅದು ಪ್ರತಿ ಸಬ್ಬತ್ ದಿನವು ಸಭಾಮಂದಿರಗಳಲ್ಲಿ ಪಾರಾಯಣವಾಗುತ್ತದಲ್ಲಾ ಎಂದು ಹೇಳಿದನು" (ವಚನ 21).[15]

## ಕೃಪೆಯಿಂದ ಹೊಂದಿಕೊಳ್ಳಲು ಮುಂದಾಗಿರಿ (15:22, 25)

ಯಾಕೋಬನು ಅಂತ್ಯಗೊಳಿಸಿದಾಗ, ಗುರುತರವಾದ ಹಾಗೂ ಅಮೋಘವಾದ ಒಂದು ವಿಷಯವು ಜರುಗಿತ್ತು; ಪೂರ್ಣ ಸಭೆಯು ಒಂದು ಸಮ್ಮತಿಗೆ ಬಂದರು. ವಚನ 22 ಹೇಳು ವಂತೆ, "ಆಗ ಅಪೊಸ್ತಲರೂ ಸಭೆಯ ಹಿರಿಯರೂ *ಸರ್ವಸಭೆಯ* ಸಮ್ಮತಿಯಿಂದ ತಮ್ಮಲ್ಲಿ ಕೆಲವರನ್ನು ಆರಿಸಿಕೊಂಡು ಪೌಲ ಬಾರ್ನಬರ ಜೊತೆಯಲ್ಲಿ ಅಂತಿಯೋಕ್ಯಕ್ಕೆ ಕಳುಹಿಸುವದು ಯುಕ್ತವೆಂದು ತೀರ್ಮಾನಿಸಿದರು." (ಒತ್ತಿ ಹೇಳಿದ್ದು ನನ್ನದು.) "ಇದನ್ನು ಯುಕ್ತವೆಂದು *ನಾವೆಲ್ಲರೂ ಏಕಮನಸ್ಸಾಗಿ* ತೀರ್ಮಾನಿಸಿದವು" (ವಚನ 25; ಒತ್ತಿ ಹೇಳಿದ್ದು ನನ್ನದು). ಸುನ್ನತಿ ಮಾಡಿಸಿಕೊಳ್ಳಬೇಕೆಂದು ಹೇಳಿದವರೆಲ್ಲರೂ, ಪ್ರೇರಿತರಾದ ಪೇತ್ರ, ಪೌಲ, ಬಾರ್ನಬ ಹಾಗೂ ಯಾಕೋಬ[16] ಇವರುಗಳ ತೀರ್ಮಾನವನ್ನು ಒಪ್ಪುವದಕ್ಕೆ ಮುಂದಾದರು. ಈ ವಿಷಯದಲ್ಲಿ (ಸಮ್ಮತಿಸಬಹುದು), ಈ ದಿನಗಳಲ್ಲಿ ತಮ್ಮ ಅಭಿಪ್ರಾಯವನ್ನೇ ಸಮ್ಮತಿಸಬೇಕು ಎಂಬುವವರಿಗಿಂತ, ಈ ಜನರು ದೊಡ್ಡವರಾಗಿದ್ದರು ಎಂದು ಹೇಳಬಹುದು, ಆತ್ಮೀಯ ನಿಯಮಗಳಿದ್ದರೆ ಮಾತ್ರ ಹೊಂದಾಣಿಕೆ[17] ಮಾಡಬಹುದು ಎಂದು ಹೇಳುವವರಿಗಿಂತಲೂ ದೊಡ್ಡವರಾಗಿದ್ದರು. ನಮ್ಮ ವೈಯಕ್ತಿಕ ಅಭಿಪ್ರಾಯಗಳಿಗೆ ಸಮ್ಮತಿ ಸಿಗದೆ ಇರುವಾಗ, ಅನಿರ್ಣಯಗಳನ್ನು ಕೈಕೊಂಡ ಹೆಚ್ಚಿನವರ ಅಭಿಪ್ರಾಯಕ್ಕೆ ಸಮ್ಮತಿ ನೀಡಬೇಕು.

## ವೈಯಕ್ತಿಕಕ್ಕೆ ಮೀಸಲಾಗಿಡಿ (15:22-29)

ಪತ್ರವನ್ನು ಕಳುಹಿಸಲು ನಿರ್ಣಯಿಸಿದ ನಂತರ, "ಅಪೊಸ್ತಲರೂ ಸಭೆಯ ಹಿರಿಯರೂ ಸರ್ವಸಭೆಯ ಸಮ್ಮತಿಯಿಂದ" "ತಮ್ಮಲ್ಲಿ ಕೆಲವರನ್ನು ಆರಿಸಿಕೊಂಡು ಪೌಲ ಬಾರ್ನಬರ ಸಂಗಡ ಅಂತಿಯೋಕ್ಯಕ್ಕೆ ಕಳುಹಿಸುವದು ಯುಕ್ತವೆಂದು ತಿಳಿದರು" (ವಚನ 22ಎ). ನಿರ್ಣಯದಲ್ಲಿದ್ದ ವಿವೇಕವನ್ನು ತಿಳಯಬಹುದು ಪೌಲ ಬಾರ್ನಬರು ಮಾತ್ರ ಪತ್ರವನ್ನು ತೆಗೆದುಕೊಂಡು ಹಿಂತಿರುಗಿದ್ದರೆ, ಅವರೆ ಆ ಪತ್ರಿಕೆಯನ್ನು ಬರೆದಿರಬಹುದು ಎಂಬ ಸಂಶಯ ಉಂಟಾಗಬಹುದಿತ್ತು. ಕಳುಹಿಸುವವರು ಆ ಸಾಧ್ಯತೆಯನ್ನು ಇಲ್ಲದಂತೆ ಮಾಡಿದ್ದರು. ಪತ್ರಿಕೆಯ ರವಾನೆಗೆ ಇಬ್ಬರು ಮನುಷ್ಯರನ್ನು ಆಯ್ಕೆ ಮಾಡಿದ್ದರು: "ಬಾರ್ನಬನೆನಸಿಕೊಳ್ಳುವ[18] ಯೂದನನ್ನು ಮತ್ತು ಸೀಲನನ್ನು,[19] ಅವರು ಸಹೋದರರಲ್ಲಿ ಮುಖ್ಯಸ್ಥರಾಗಿದ್ದರು"[20] (ವಚನ 22ಬಿ). ಅವರು ಪ್ರವಾದಿಗಳೂ ಆಗಿದ್ದರು (ವಚನ 32). ಅವರನ್ನು ಕಳುಹಿಸಿದ್ದ ಉದ್ದೇಶವನ್ನು ಪತ್ರದಲ್ಲಿ ತಿಳಿಸಲಾಗಿತ್ತು: "ಆದದರಿಂದ ಯೂದನನ್ನೂ ಸೀಲನನ್ನೂ ಕಳುಹಿಸಿದ್ದೇವೆ, ಅವರು ಈ ಸಂಗತಿಗಳನ್ನು ಬಾಯಿಮಾತಿನಿಂದಲೂ ನಿಮಗೆ ತಿಳಿಸುವರು" (ವಚನ 27). ಯೂದ ಮತ್ತು ಸೀಲರು, ಅವರ ಪತ್ರವು ಯೋಗ್ಯವಾದದ್ದು ಎಂದು ತಿಳಿಸಿ, ಅವರು ಕೇಳಿದ ಪ್ರಶ್ನೆಗಳಿಗೆ ಬಾಯಿಂದ ಉತ್ತರ ನೀಡಲು ಸಿದ್ಧರಾಗಿದ್ದರು.

ಆ ಪತ್ರವು ಪ್ರೇರಣೆಯನ್ನು ಹೊಂದಿತ್ತು. ಪತ್ರದ ಕೊನೆಯಲ್ಲಿ, ನಾವು ಈ ಪದಗಳನ್ನು ನೋಡುತ್ತೇವೆ: "ಇದಕ್ಕೆ ಹೆಚ್ಚಿನ ಬಾರವನ್ನು ನಿಮ್ಮ ಮೇಲೆ ಹಾಕಬಾರದೆಂದು ಪರಿಶುದ್ಧಾತ್ಮನಿಗೂ ನಮಗೂ ವಿಹಿತವಾಗಿ ತೋರಿತು ..." (ವಚನ 28; ಒತ್ತಿ ಹೇಳಿದ್ದು ನನ್ನದು). ಇದು ಪ್ರೇರಿತವಾದ ಮೊದಲನೆಯ ಪತ್ರಿಕೆಯಾಗಿದೆ. ಈ ದಿನಗಳಲ್ಲಿ ಸಭೆಗಳ ಸಮ್ಮೇಳನ ನಡೆಯುವಂಥ, ಸಭೆಯು ಯೆರೂಸಲೇಮಿನಲ್ಲಿ ನಡೆಯಲಿಲ್ಲ ಎಂಬುದಕ್ಕೆ ಇದು ರುಜುವಾತು ಮಾಡಿರುತ್ತದೆ: ಈ ದಿನದಲ್ಲಿ ನಡೆಯುವ ಅಂತಹ ಸಂಘಟನೆಗಳು, ಯಾವುದೇ ವಿಧವಾದ

ಆತ್ಮನ ಪ್ರೇರಿತ ದಾಖಲನ್ನು ಮಾಡಲಾರವು.

ತೀಕ್ಷ್ಣ ತಿಳುವಳಿಕೆಯುಳ್ಳ ಈ ನಿದರ್ಶನವು, ಈ ಪತ್ರದಲ್ಲಿ ಆ ದಿನದ ವಂದನೆಯನ್ನೇ ಹೊಂದಿತ್ತು: "ಅವರ ಕೈಯಿಂದ ಬರೆದುಕೊಟ್ಟದೇನೆಂದರೆ - ಸಹೋದರರಾಗಿರುವ ಅಪೊಸ್ತಲರು, ಹಿರಿಯರೂ ಅಂತಿಯೋಕ್ಯ ಸಿರಿಯ ಕಿಲಿಕ್ಯ[21] ಸೀಮೆಗಳಲ್ಲಿಗೆ ವಾಸಿಸುವ ಅನ್ಯಜನರೊಳಗಿಂದ ಸಹೋದರರಾದವರಿಗೆ ಮಾಡುವ ವಂದನೆ" (ವಚನ 23). "ಸಹೋದರರೆಂಬ" ಪದವನ್ನು ಗಮನಿಸಿ, ಅಂತಿಯೋಕ್ಯದ ಕ್ರೈಸ್ತರನ್ನು ಕುಟುಂಬದ ಸಂಬಂಧ ಎಂದು ಒಪ್ಪಿಕೊಂಡರು.

ಅಂತಿಯೋಕ್ಯಕ್ಕೆ ಬಂದವರು, ಯೆರೂಸಲೇಮಿನ ಸಭೆಯ ಪ್ರತಿನಿಧಿಗಳಾಗಿರಲಿಲ್ಲ ಎಂದು ತೋರ್ಪಡಿಸಿದರು. ಅವರಿಂದ ಉಂಟಾದ ಸಮಸ್ಸೆಗಾಗಿ ಚಿಂತನೆ ಮಾಡಿದರು:

> ಅದಾಗಿನಮ್ಮೊಳಗಿಂದ ಹೋದ ಕೆಲವರು ನಮ್ಮಿಂದ ಏನೂ ಅಪ್ಪಣೆಹೊಂದದೆ ತಮ್ಮ ಮಾತುಗಳಿಂದ ನಿಮ್ಮಲ್ಲಿ ಅಸಮಾಧಾನವನ್ನು ಹುಟ್ಟಿಸಿ ನಿಮ್ಮ ಮನಸ್ಸುಗಳನ್ನು ಕಳವಳಗೊಳಿಸಿದ್ದಾರೆಂಬದನ್ನು ಕೇಳಿದ್ದರಿಂದ ನಾವು ಕೆಲವರನ್ನು ಆರಿಸಿಕೊಂಡು[22] ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನ ನಿಮಿತ್ತ ಜೀವದ ಹಂಗನ್ನು ತೊರೆದವರಾದ ನಮ್ಮ ಪ್ರಿಯ ಬಾರ್ನಬ ಪೌಲರ[23] ಜೊತೆಯಲ್ಲಿ ನಿಮ್ಮ ಬಳಿಗೆ ಕಳುಹಿಸಿಕೊಡುವದು ಯುಕ್ತವೆಂದು ನಾವೆಲ್ಲರೂ ಏಕಮನಸ್ಸಾಗಿ ತೀರ್ಮಾನಿಸಿದೆವು. ಆದದರಿಂದ ಯೂದನನ್ನೂ ಸೀಲನನ್ನೂ ಕಳುಹಿಸಿದ್ದೇವೆ (ವಚನಗಳು 24-27).

ಪೌಲ ಬಾರ್ನಬರು ಮಾಡಿದ ಕಾರ್ಯದಲ್ಲಿದ್ದ ಅವರ ಸಾಮಾರ್ಥ್ಯವನ್ನು ಅಂತಿಯೋಕ್ಯ ಸಭೆಯು ಚನ್ನಾಗಿ ಅರಿತುಕೊಂಡಿತ್ತು.

ಯಾಕೋಬನು ತಿಳಿಸಿದ ನಿಷೇದದ ಸಂಗತಿಗಳ ಒಕ್ಕಣೆಯನ್ನು ಪತ್ರದಲ್ಲಿ ದಾಖಲಿಸಲಾಗಿತ್ತು:

> ಅವರು ಈ ಸಂಗತಿಗಳನ್ನು ಬಾಯಿಮಾತಿನಿಂದಲೂ ನಿಮಗೆ ತಿಳಿಸುವರು. ವಿಗ್ರಹಕ್ಕೆ ನೈವೇದ್ಯಮಾಡಿದ್ದನ್ನೂ ರಕ್ತವನ್ನೂ ಕುತ್ತಿಗೆಹಿಸುಕಿ ಕೊಂದದ್ದನ್ನೂ ಹಾದರವನ್ನೂ ವಿಸರ್ಜಿಸುವದು ಅವಶ್ಯವಾಗಿದೆ. ಇದಕ್ಕೆ ಹೆಚ್ಚಿನ ಭಾರವನ್ನು ನಿಮ್ಮ ಮೇಲೆ ಹಾಕಬಾರದೆಂದು ಪವಿತ್ರಾತ್ಮನಿಗೂ ನಮಗೂ ವಿಹಿತವಾಗಿ ತೋರಿತು. ನೀವು ಎಚ್ಚರವಾಗಿದ್ದು ಇವುಗಳ ಗೊಡವೆಗೆ ಹೋಗದಿದ್ದರೆ ನಿಮಗೆ ಒಳ್ಳೇದಾಗುವದು. ಶುಭವಾಗಲಿ (ವಚನಗಳು 28, 29).

ಯೆರೂಸಲೇಮಿನ ಸಹೋದರರು ಕೇವಲ ಪತ್ರವನ್ನೇ ಅವಲಂಭಿಸಿರಲಿಲ್ಲ; ಆ ಪತ್ರದೊಂದಿಗೆ ಇಬ್ಬರು ಮನುಷ್ಯರನ್ನು ಕಳುಹಿಸಿದ್ದರು. ಅವರು ತಮ್ಮ ಹೊಣೆಯೊಂದಿಗೆ, *ವೈಯಕ್ತಿಕ ಸ್ಪರ್ಶವನ್ನು* ಸಹ ನೀಡಿದರು.

ಪತ್ರವು ತನ್ನದೆ ಆದ ಅರ್ಹತೆಯನ್ನು ಹೊಂದಿರುತ್ತದೆ.[24] ಸಕಲ ಸಂಗತಿಯನ್ನು "ಬರೆದು ದಾಖಲು ಮಾಡುವದು ಯುಕ್ತವೆ." ಇನ್ನೊಂದು ವಿಧದಲ್ಲಿ, ಪತ್ರಿಕೆಗಳು, ಸಮಾಧಾನದ ಬದಲು, ಭಿನ್ನಾಭಿಪ್ರಾಯಗಳನ್ನು ಹೊತ್ತಿ ಉರಿಯುವಂತೆ ಮಾಡಿರುವದನ್ನು ಸಹ ನಾನು ನೋಡಿರುವೆನು - ಮುಖ್ಯವಾಗಿ ಉದ್ವೇಗದಿಂದ ಕೂಡಿದ ಪತ್ರಗಳು.[25] ಅಂತಹ ಪತ್ರಿಕೆಗಳಲ್ಲಿ ನ್ಯೂನತೆಗಳು ಇರುತ್ತವೆ. ಅದನ್ನು ಓದುವದನ್ನು ಅದನ್ನು ಅಪಾರ್ಥ ಮಾಡಿಕೊಳ್ಳುವವನಾದರೆ, ಅದನ್ನು ಸ್ಪಷ್ಟ ಪಡಿಸಲು ಯಾರೂ ಇರುವದಿಲ್ಲ. ಪತ್ರದಲ್ಲಿ ಟೀಕೆಮಾಡುವ ಪದಗಳಿದ್ದರೆ, ಅದು ಮುಖಾಮುಖಿಯಾಗಿ ಹೇಳಿದ ಮಾತಿನಂತೆ ಇರುವದಿಲ್ಲ. ಆದರೆ ಅದನ್ನು ಓದುವವನು ಆಪದಗಳನ್ನು ಪುನಃ ಪುನಃ ಓದುವದರಿಂದ ಪ್ರತೀ ಸಲವೂ ಅಸಂತೋಷಗೊಳ್ಳುವನು.[26]

ಸಭೆಯಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯವನ್ನು ಪರಿಹರಿಸುವ ಕಾರ್ಯದಲ್ಲಿ

ನೀವು ನಿರತರಾಗಿದ್ದರೆ, ಪತ್ರ ಬರೆಯುವ ವಿಚಾರದಲ್ಲಿ ನಾನು ನಿಮಗೆ ಎರಡು ವಿಧಗಳನ್ನು ತಿಳಿಸುವೆನು: (1) ನೀವು *ಖಂಡಿತ* ಪತ್ರವನ್ನು ಬರೆಯುವುದಾದರೆ, ಯೆರೂಸಲೇಮಿನವರಂತೆ ತಿಳುವಳಿಕೆಯಿಂದ ಬರೆಯಿರಿ. ನೀನು ಗೊಂದಲದಲ್ಲಿರುವಾಗ, ಪತ್ರವನ್ನು ಬರೆಯಬೇಡ; ಒಂದು ವೇಳೆ ಬರೆದಿರುವುದಾದರೆ, ಅದನ್ನು ಕೆಲವು ದಿವಸಗಳಾದ ನಂತರ ಕಳುಹಿಸಿರಿ, ಅದನ್ನು ಪುನಃ ಪುನಃ ಓದಿ ಅದರ ಕುರಿತು ಪ್ರಾರ್ಥಿಸಿರಿ. (2) ವಿರೋಧ ವ್ಯಕ್ತ ಪಡಿಸುವ ಜನರೊಂದಿಗೆ ಮಾತನಾಡುವ ಅವಕಾಶವಿರುವುದಾದರೆ, ಪತ್ರವನ್ನು ಬರೆಯ*ಬೇಡಿರಿ*. "ಆದರೆ ನಾನು ಮಾತನಾಡುವಾಗ ಆಲೋಚನೆಗಳು ಬರುವದಿಲ್ಲವೆಂದು ಕೆಲವರು ಕಾರಣ ನೀಡಬಹುದು," ಹಾಗಿದ್ದರೆ ಯೆರೂಸಲೇಮಿನ ನಿದರ್ಶನವನ್ನು ಪಾಲಿಸಿರಿ: ನಿಮ್ಮ ಪತ್ರವನ್ನು ಬರೆದು *ವೈಯಕ್ತಿಕವಾಗಿ* ಅದನ್ನು ನೀಡಿರಿ.

ಅದನ್ನು ಓದಿದಾಗ, ಉತ್ತರ ನೀಡಲು ಸಿದ್ಧವಾಗಿರ್ರಿ. ಇತರರೊಂದಿಗೆ ವೈಕ್ತಿಗತವಾಗಿ ವ್ಯವಹರಿಸಿರಿ!

## ಸಕರಾತ್ಮಕವಾದ ಮನೋಭಾವವನ್ನು ಹೊಂದಿರ್ರಿ (15:30-35)

ನಂಬಬಹುದು ಅಥವಾ ನಂಬದೆ ಇದ್ದರೂ, ಭಿನ್ನಾಭಿಪ್ರಾಯಗಳಿಂದ ಒಳ್ಳೆಯ ಕಾರ್ಯಗಳು ಉಂಟಾಗುತ್ತವೆ - ನಾವು ಸಕಾರಾತ್ಮಕವಾಗಿ ಮತ್ತು ಸರಿಯಾಗಿ ಮಾಡಿದರೆ ಮಾತ್ರ ಅದು ಸಾಧ್ಯ. ಈ ಹಿಂದೆಯೇ ಪರಿಹರಿಸಿಕೊಳ್ಳಬೇಕಿದ್ದ ಭಿನ್ನಾಭಿಪ್ರಾಯಗಳನ್ನು ಬಹಿರಂಗವಾಗಿ ಬೆಳಕಿಗೆ ತರಬೇಕು, ಭಿನ್ನಾಭಿಪ್ರಾಯಗಳ ಮೂಲಕ ಸಮಸ್ಯೆಗಳನ್ನು ತಿಳಿಯುವ ಸಾಧ್ಯತೆ ಇರುತ್ತದೆ - ಅದರಲ್ಲಿ ದೇವರ ಚಿತ್ತವನ್ನು ತಿಳಿಯಲು ಸಾಧ್ಯವಾಗುತ್ತದೆ. ನಾವು ಅಲಕ್ಷಮಾಡಿದ ಸಂಬಂಧಗಳನ್ನು ಭಿನ್ನಾಭಿಪ್ರಾಯಗಳು ಪುನಃ ನಿರ್ಮಿಸುತ್ತವೆ. ವಚನ 30ರಿಂದ 35ರವರೆಗಿನ ವಾಕ್ಯವು, ಅಪೊಸ್ತಲರ ಕೃತ್ಯಗಳು 15ರಲ್ಲಿ ಉಂಟಾದ ಸಕಾರಾತ್ಮಕವಾದ ಪರಿಣಾಮವನ್ನು ತಿಳಿಸುತ್ತದೆ.

(1) ಅಲ್ಲಿ ಸಂತೋಷವಾಯಿತು. ಪೌಲ ಬಾರ್ನಬರು, ಯೆರೂಸಲೇಮಿನವರ ಪ್ರತಿ ನಿಧಿಗಳೊಂದಿಗೆ, "ಅಂತಿಯೋಕ್ಯಕ್ಕೆ ಬಂದು ಮಂಡಲಿಯನ್ನು ಕೂಡಿಸಿ ಆ ಕಾಗದವನ್ನು ಅವರಿಗೆ ಒಪ್ಪಿಸಿದರು. ಅವರು ಓದಿ ಅದರಿಂದ ಧೈರ್ಯ ತಂದುಕೊಂಡು ಸಂತೋಷ ಪಟ್ಟರು" (ವಚನಗಳು 30, 31). ಅನ್ಯರು ನೇಮಗಳನ್ನು ಪಾಲಿಸಬೇಕೆಂದು ಕಡ್ಡಾಯ ಮಾಡದೆ ಇದ್ದದರಿಂದ ಅಂತಿಯೋಕ್ಯದ ಸಹೋದರರು ಉತ್ತೇಜನಗೊಂಡರು; ಭಿನ್ನಾಭಿಪ್ರಾಯ ಶಮನವಾದ್ದರಿಂದ ಮತ್ತು ಅವರ ಮನವಿಯು ಹಗುರವಾದದರಿಂದ ಅವರೆಲ್ಲರೂ ಸಂತೋಷಪಟ್ಟರು.[27]

(2) ದೇವರ ವಾಕ್ಯದ ಪ್ರಸಾರಣೆಯು ಮುಂದುವರಿಯಿತು. "ಯೂದನು ಸೀಲನೂ ತಾವೇ ಪ್ರವಾದಿಗಳಾಗಿದ್ದದರಿಂದ ಸಹೋದರರನ್ನು ಅನೇಕ ಮಾತುಗಳಿಂದ ಪ್ರಭೋದಿಸಿ ದೃಢಪಡಿಸಿದರು"[28] (ವಚನ 32). ವಚನ 35ರಲ್ಲಿ, "ಪೌಲನೂ ಬಾರ್ನಬನೂ ಅಂತಿಯೋಕ್ಯದಲ್ಲಿಯೇ ನಿಂತು ಬೇರೆ ಅನೇಕರೊಂದಿಗೆ,[29] ಉಪದೇಶ ಮಾಡುತ್ತಾ ಕರ್ತನ ವಾಕ್ಯವೆಂಬ ಸುವಾರ್ತೆಯನ್ನು ಸಾರುತ್ತಾ ಇದ್ದರು."

(3) ಯೆಹೂದ್ಯರ ಹಾಗೂ ಅನ್ಯರ ನಡುವಿನ ಸಂಬಂಧ ಪ್ರಬಲವಾಯಿತು. ವಚನ 33ರಲ್ಲಿ "[ಯೂದ ಮತ್ತು ಸೀಲ] ಅವರು ಕೆಲವು ಕಾಲ ಕಳೆದ ನಂತರ ತಮ್ಮನ್ನು ಕಳುಹಿಸಿದ್ದವರ ಬಳಿಗೆ ತಿರಿಗಿ ಹೋಗುವದಕ್ಕೆ[30] ಸಹೋದರರಿಂದ ಅಪ್ಪಣೆ ತೆಗೆದುಕೊಂಡರು." ಅಂತಿಯೋಕ್ಯದ ಸಹೋದರರು ಬಂದಂತ ಹಾಗೂ ಕಳುಹಿಸಿದಂತ ಜನರನ್ನು ಮೆಚ್ಚಿಕೊಂಡರು.[31]

ಭಿನ್ನಾಭಿಪ್ರಾಯದ ಸಮಯದಲ್ಲಿ ಸಕರಾತ್ಮಕವಾಗಿ ಯೋಚಿಸುವದು ಕಷ್ಟಕರವೆ. "ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ" (ರೋಮಾಪುರ 8:28) ಎಂಬ ವಾಕ್ಯವನ್ನು

ಗಟ್ಟಿಯಾಗಿ ಹಿಡಿದುಕೊಳ್ಳೋಣ - ಅದನ್ನು ಬಿಟ್ಟು ಬಿಡದೆ ಇರೋಣ!

## ಮುಕ್ತಾಯ

ಅಪೊಸ್ತಲರ ಕೃತ್ಯಗಳು 15:1-35ರ, ಪರಿಶೀಲನೆಯಲ್ಲಿ, ಸಭೆಯಲ್ಲಿ ಉಂಟಾಗುವ ಸಮಸ್ಯೆಗಳ ಪರಿಹಾರಕ್ಕಾಗಿ, ಅನೇಕ ನಿಯಮಗಳನ್ನು ಕುರಿತು ಕಂಡು ಕೊಂಡೆವು - ಅದು ಸೈದ್ಧಾಂತಿಕ ಭಿನ್ನಾಭಿಪ್ರಾಯ, ಅಂದರೆ ಅಪೊಸ್ತಲರ ಕೃತ್ಯಗಳು 15ರಂತೆ, ಅಥವಾ ವಿವಿಧ ಸಲಹೆಗೆ ಆಗಿರ ಬಹುದು. ನಮ್ಮ ಅಧ್ಯಾಯನದ ಸಾರಾಂಶವನ್ನು ಹೇಗೆ ಮಾಡೋಣ? ಅಪೊಸ್ತಲರ ಕೃತ್ಯಗಳು 15ರ "ಐಕ್ಯತೆಯ ನಿಯಮಗಳನ್ನು" ನಾನು ಪ್ರಶಂಸಿಸುತ್ತೇನೆ, "ಕರ್ತನಾದ ಯೇಸುವಿನ ಕೃಪೆಯಿಂದಲೇ, ಸಮಾಧಾನವನ್ನು ಸಾರಿರಿ" "ನಾವು ಕೃಪೆಯಿಂದಲೇ ರಕ್ಷಿಸಲ್ಪಟ್ಟಿರುವೆವು"[32] ಎಂದು ಪೇತ್ರನು ತಿಳಿಸಿರುವನು (ವಚನ 11). ಈ ಪಾಠದಲ್ಲೂ ಹಾಗೂ ಹಿಂದಿನ ಪಾಠದಲ್ಲೂ, ನಾವು ತಗ್ಗಿದವರಾಗಿರಬೇಕು ಎಂದು ಒತ್ತಿ ಹೇಳಿದ್ದೇವೆ, ನಿಸ್ವಾರ್ಥರೂ, ಚಿಂತಕರೂ, ಹಾಗೂ ತೀಕ್ಷ್ಣ ಬುದ್ಧಿಯುಳ್ಳವರಾಗಿರ್ರಿ ಎಂದೂ ತಿಳಿಸಿದ್ದೇವೆ ಇವೆಲ್ಲವುಗಳ್ನು "ಪ್ರೀತಿ" ಎಂಬ ಒಂದೇ ಪದದ ಸಾರಾಂಶವನ್ನಾಗಿ ಮಾಡಬಹುದು ಅದು ಭಿನ್ನಾಭಿಪ್ರಾಯದ ಸ್ವಭಾವವನ್ನು ಜೈಸುತ್ತದೆ. "ನೀವು ಮಾಡುವದೆಲ್ಲವನ್ನೂ *ಪ್ರೀತಿಯಿಂದ* ಮಾಡಿರಿ" (1 ಕೊರಿಂಥ 16:14; ಒತ್ತಿ ಹೇಳಿದ್ದು). ಸತ್ಯಕ್ಕಾಗಿ ನಿಲ್ಲುವಾಗಲೂ, ಅದನ್ನು ದ್ವೇಷ ವಿಲ್ಲದೆ ಮಾಡಿರಿ (ಎಫೆಸ 4:15). ನಮ್ಮ ಕ್ರಿಯೆ ಹಾಗೂ ಮಾತುಗಳಲ್ಲಿ ಪ್ರೀತಿಯನ್ನೇ ತೋರಿಸುವಂತೆ ನಮ್ಮ ದೇವರು ನಮಗೆ ಸಹಾಯಿಸಲಿ!

---

ಟಿಪ್ಪಣಿಗಳು

[1]ನಿಮ್ಮ ಹಳೇ ಒಡಂಬಡಿಕೆಯ ಆಮೋಸ 9:12 (ಅದು ಇಬ್ರಿಯ ವಾಕ್ಯ ಭಾಗ) ಅಲ್ಲಿ ಎದೋಮ್ಯರ ಕುರಿತು ನೋಡುತ್ತೇವೆ (ಗ್ರೀಕ್ ತರ್ಜುಮೆ) ಮನುಷ್ಯರೆಲ್ಲರಿಗೂ ಸಾಮಾನ್ಯವಾದ ಹೇಳಿಕೆಯನ್ನು ಹೊಂದಿರುತ್ತದೆ, ಯಾಕೋಬನು ಸೆಪ್ಟ ಜೂಯಂಟಿನ ವಾಕ್ಯವನ್ನು ಹೇಳಿರಬಹುದು. [2]"ನನ್ನ ಹೆಸರಿನಿಂದ ಕರೆಯಲ್ಪಟ್ಟ ಸಕಲ ಅನ್ಯರು" ಎಂಬ ಹೇಳಿಕೆಯನ್ನು ನೀಡಿರುವರು (ವಚನ 17). ಎಲ್ಲಾ ಅನ್ಯರ ಮೇಲೆ ನನ್ನ ಹೆಸರಿದೆ (ಸ್ನಾನದ ಮೂಲ) (*The Book of the Acts,* rev. ed., The New International Commentary on the New Testament [Grand Rapids, Mich.: Wm. B. Eerdmans Publishing Co., 1988] 294). [3]ಸಾವಿರ ವರ್ಷಗಳ ಆಡಳಿತಕ್ಕಿಂತ ಮುಂಚಿನ ಬೋಧಕರು, ಅಮೋಸ 9:11, 12 ಭವಿಷ್ಯದಲ್ಲಿ ನೆರವೇರುವದು ಎಂದು ಹೇಳುವರು, ಯೇಸು ಹಿಂದಿರುಗುವಾಗ ಸಂಭವಿಸುತ್ತದೆ. ದೇವರು ಸುವಾರ್ತೆಯ ಪ್ರಸಾರಣೆಗಾಗಿ, ಅಪೊಸ್ತಲರ ಕೃತ್ಯಗಳು, 1ನೇ ಪುಸ್ತಕದಲ್ಲಿ ಈ ವಾಕ್ಯವನ್ನು ಬಳಸಲಾಗಿದೆ ಎಂದು ಯಾಕೋಬನು ತಿಳಿಸಿರುವನು, ಇದರಿಂದ ಅನ್ಯಜನರು ಕ್ರೈಸ್ತರಾಗಬಹುದು. [4]ಮೆಸ್ಸಿಯನು ಇಸ್ರಾಯೇಲನ್ನು ಪುನಃ ಸ್ಥಾಪನೆ ಮಾಡುವದಕ್ಕಾಗಿ, ದಾವೀದನ ಗುಡಾರವನ್ನು ಕಟ್ಟುವನು ಎಂದು ಯೆಹೂದ್ಯರು ನಂಬಿದ್ದರು, ಇವೆಲ್ಲವು ಯೇಸುವಿನಲ್ಲಿ ಈಗಗಲೇ ನೆರವೇರಿಸುತ್ತದೆ. [5]ಜನರು ಮಾತನಾಡಬೇಕೆಂದು ಗಲಾತ್ಯ 2:2-10 ಪ್ರತ್ಯೇಕವಾದ ಸಭೆಯಲ್ಲಿ ನಿರ್ಧರಿಸಲಾಯಿತು, ಅನ್ಯರು ಸುನ್ನತಿ ಮಾಡಿಸಿಕೊಳ್ಳಬೇಕೆಂಬ ವಿಷಯದಲ್ಲಿ ಒತ್ತು ನೀಡಲು ಯಾಕೋಬನು ಅಂತಿಮವಾಗಿ ಮಾತನಾಡಿದನು, ಅವರು ನೇಮವನ್ನು ಪಾಲಿಸುವದು ಅನಗತ್ಯವೆಂಬುದನ್ನು ಯಾಕೋಬನು ಈ ಮೊದಲೆ ನಿರ್ಧರಿಸಿದ್ದನು. [6]ಯೆಹೂದ್ಯ ಮತ್ತು ಅನ್ಯರ ಸಂಬಂಧಕ್ಕೆ ಈ ಎರಡು ಅಂಶಗಳು ಸೂಚನೆಯಾಗಿವದರಿಂದ ಹತ್ತಿರದ ಸಂಬಂಧಿಗಳನ್ನು ಮದುವೆಯಾಗುವದು "ಹಾದರ" ಎಂದು ಅವರು ತಿಳಿದಿದ್ದರು (ಯಾಜಕಕಾಂಡ 18:6-18) ಈ ಅನ್ಯರ ಅನುಕರಣೆಯು, ಯೆಹೂದ್ಯ ಹಿನ್ನೆಲೆವುಳ್ಳವರಿಗೆ ಅಡ್ಡಿಯಾಗಿತ್ತು. [7]ಪುಸ್ತಕಗಳನ್ನು, ಚಲನ ಚಿತ್ರಗಳನ್ನು, ಹಾಗೂ ದೂರದರ್ಶನದ ಕಾರ್ಯಕ್ರಮಗಳನ್ನು ನಡಿಸುವ ಪ್ರಪಂಚದ ಜನರು ಹೆಡೋನಿಸ್ಟರ ತತ್ವವನ್ನೇ ಪಾಲಿಸುತ್ತಾರೆ. [8]Quoted by John Waddey, "The Discussion Over Circumcision and the Law," *Studies in Acts* (Denton, Tex.: Valid Publications, 1985), 171. [9]ವಿಗ್ರಹಕ್ಕೆ ಒಂದು ಪ್ರಾಣಿಯನ್ನು ಬಲಿಕೊಡುವಾಗ, ಕೆಲವು ಪೂಜಕರು ಅದರ ರಕ್ತವನ್ನು ಕುಡಿಯುತ್ತಿದ್ದರು. ಬಲವುಳ್ಳ ಪ್ರಾಣಿಗಳ

ರಕ್ತವನ್ನು ಕುಡಿಯುವುದು ಸಾಮಾನ್ಯ ಸಂಗತಿಯಾಗಿತ್ತು ಬಿದ್ದುಹೋದ ವೈರಿಗಳ ರಕ್ತವನ್ನು ಸಹ ಕೆಲವರು ಕುಡಿದಿರುವರು. [10]ಅಮೆರಿಕನ್ನರ ಸಾಮಾನ್ಯ ಕ್ರಮ, ಇತರರಲ್ಲಿಯೂ ಇರಬಹುದು.

[11]ಯಜ್ಞಕ್ಕಾಗಿ ಪ್ರಾಣಿಯನ್ನು ವಧಿಸುವಾಗ ರಕ್ತವನ್ನು ವೇದಿಯ ಮೇಲೆ ಸುರಿಯುತ್ತಿದ್ದರು, ಆಹಾರಕ್ಕಾಗಿ ವಧಿಸುವಾಗ, ರಕ್ತವನ್ನು ನೆಲಕ್ಕೆ ಸುರಿಯುತ್ತಿದ್ದರು. [12]ಕ್ರೈಸ್ತರಾದ ಅನ್ಯರು ಮೊದಲ ಶತಮಾನದ ಅಂತ್ಯದಲ್ಲೂ ಈ ಪಾಪವನ್ನು ಮಾಡುತ್ತಿದ್ದರು (ಪ್ರಕಟನೆ 2:14, 20). [13] ಅಪೊಸ್ತಲರ ಕೃತ್ಯಗಳು 1ನೇ ಪುಸ್ತಕದಲ್ಲಿ ಈ 2:46ರ ಟಿಪ್ಪಣಿ ನೋಡಿರಿ. [14]ರಕ್ತ ಬುಜಿಸುವ ಕುರಿತು ಆದಿಕಾಂಡ 9:4 ನೋಡಿರಿ. [15]ಯಾಕೋಬನು ಏಕೆ ಈ ರೀತಿ ಅಂತ್ಯಗೊಳಿಸಿದನು, ಸಾಧ್ಯತೆಯ ಪಾಠವನ್ನು ನೀಡಿರುವೆನು. [16]ಕೂಟದ ಕ್ರಮವನ್ನು ಗಮನಿಸಿ, ಸುನ್ನತಿ ಎಂದು ಹೇಳುವವರು ಹಿಂಜರಿದರು ಪ್ರಶ್ನೆಯಲ್ಲಿದ್ದ ನಿರ್ಣಯವನ್ನೂ ಕೈಗೊಂಡಾಗ, ಅವರುಗಳು ಅಲ್ಲಿರಲಿಲ್ಲ, ವ್ಯಕ್ತಿಗತ ಒಪ್ಪಂದಕ್ಕಿಂತಲೂ, ಸರ್ವ ಸಭೆಯ ನಿರ್ಣಯ ಮಾಡಿದರು. ಎಲ್ಲರೂ ಸೇರಿ, ಸಭೆ ಅಂತ್ಯಗೊಂಡ ನಂತರ ನಿರ್ಣಯ ಕೈಗೊಂಡರು ಎಂಬುದು ಸ್ವಾಭಾವಿಕವಾದ ತಿಳುವಳಿಕೆ. [17]“ನಂಬಿಕೆ” ಎನ್ನುವಾಗ “ಬಹಳಜನ” ಎಂಬ ಸ್ಥಾನವು ಇಲ್ಲದ್ದಾಗುತ್ತದೆ. (ವಿಮೋಚನಕಾಂಡ 23:2; ಮತ್ತಾಯ 7:13, 14). [18]“ಬಾರ್ನಬ ಎಂಬ ಯೂದನ ಕುರಿತು ಮಾಹಿತಿ ಇಲ್ಲ ಇಬ್ಬರು ಏಕೆ ಒಂದೇ ಪದನಾಮ ಹೊಂದಿದ್ದರು (ಸಬ್ಬತ್ತಿನ ಮಗನು)” ಬಾರ್ನಬನು, ಯೋಸೇಫನ ಸಹೋದರನೆಂಬ ಸಂಶಯವಿದೆ, ನಾನು ಊಹಿಸಲಾರೆ. [19]ಇದು ಸೀಲನ ಪರಿಚಯ, ಅವನು ಪೌಲನ ಪ್ರಯಾಣದಲ್ಲಿ ಸಹಕರಿಸಿದನು, ಅವನು ಕುರಿತು ಮುಂದಿನ ಪಾಠದಲ್ಲಿರುವ ಹೊಸ ತಂಡ ಮತ್ತು ಹೆಚ್ಚಿನ ಎಂಬದನ್ನು ನೋಡಿರಿ. [20]ಇಬ್ರಿಯ 13:17ರ ನಾಯಕರು ಎಂಬದನ್ನು ಗ್ರೀಕ್‌ನ “ನಾಯಕ” ಎಂದು ತರ್ಜುಮೆ ಮಾಡಲಾಗಿದೆ. ಯೂದ ಮತ್ತು ಸೀಲರು, ಯೇರೂಸಲೇಮಿನ ಹಿರಿಯರು ಎಂಬದು ಸಂಶಯ ಯೆರೂಸಲೇಮಿನವರು ಇಬ್ಬರು ಹಿರಿಯರನ್ನು ಕಳುಹಿಸಿರಬಹುದು.

[21]ತರುವಾಯ ಪೌಲನು ಗಲಾತ್ಯ ಮತ್ತು ಪೆರ್ಗೆಗೆ ಪತ್ರ ಬರೆದನು (16:4-6) ಅದು ಎಲ್ಲಿಯವರೆಗೆ ಹೋಯಿತು ಎಂದು ಅರಿಯೆವು, ಎಲ್ಲಾ ಸಹೋದರರಿಗೂ ರವಾನೆಯಾಯಿತು. [22]“ಅಡ್ಡಿ” ಮತ್ತು “ಗೊಂದಲ” ಎಂಬ ಗ್ರೀಕ್ ಪದಗಳ ಭಿನ್ನಾಭಿಪ್ರಾಯದ ಸೂಚನೆಯನ್ನು ನೀಡಿತ್ತು, ಅದು ಸಭೆಯನ್ನು ವಿಭಾಗಿಸುವ ಹಂತದಲ್ಲಿತ್ತು, [23]ಯೆರೂಸಲೇಮಿನಲ್ಲಿ ಬಾರ್ನಬನು ಪ್ರಖ್ಯಾತಿಗೊಂಡದ್ದರಿಂದ, ಅವನ ಹೆಸರನ್ನು ಪ್ರಥಮವಾಗಿ ಹೆಸರಿಸಲಾಗಿದೆ. [24]ಹೊಸ ಒಡಂಬಡಿಕೆಯ 27ಪುಸ್ತಕದಲ್ಲಿನ, 21 ಪುಸ್ತಕಗಳು ಪತ್ರಿಕೆಗಳಾಗಿದೆ. [25]ಪ್ರಶ್ನೆ ಇಲ್ಲದ ಪತ್ರಿಕೆಯನ್ನು ಕಳಿಸುವ ಚರ್ಚೆಯಾಗಿರಲಿಲ್ಲ! [26]ಭಿನ್ನಾಭಿಪ್ರಾಯದ ಪತ್ರಿಕೆಯನ್ನು ಸಂರಕ್ಷಿಸಬಹುದು ಅದನ್ನು ಇತರರಿಗೂ ನೀಡಬಹುದು - ಭಿನ್ನಾಭಿಪ್ರಾಯ ಹರಡುವ ಚಿಂತೆಯಂತಿರುತ್ತದೆ. [27]ಕ್ರೈಸ್ತರಾದ ಅನ್ಯರು ಬಂದ ಮನವಿಗೆ ಮನ್ನಣೆ ನೀಡಿದರು. ಸಮಸ್ಯೆ ಪರಿಹಾರವಾಗ ಬೇಕಾದರೆ, ಎರಡೂ ಕಡೆಯವರು “ತಕ್ಕಮಟ್ಟಿಗೆ” ಸಂಧಾನಕ್ಕೆ ಬರಬೇಕು. [28]“ಉದ್ದವಾದ ಪ್ರಸಂಗವು” ಕೆಲವು ಸಾರಿ ಕ್ರಮವಾಗಿರುತ್ತದೆ (20:7). [29]ಅಪೊಸ್ತಲರ ಕೃತ್ಯಗಳು 13:1 ನೋಡಿರಿ. [30]“ಸಮಾಧಾನದಿಂದ ಹೋಗಿರಿ” ಎಂಬದು ಸಾಮಾನ್ಯ ಬೀಳ್ಕೊಡುಗೆ.

[31]ವಚನ 34ನ್ನು ಕೆಲವು ಗ್ರಂಥಗಳು ಸೇರಿಸಿವೆ (ಸೀಲನು ಅಲ್ಲಿರುವದು ಒಳ್ಳೆಯದೆ) ಕೆಲವು ಗ್ರಂಥಗಳು ಇದನ್ನು ಹೊಂದಿರುವದಿಲ್ಲ, ಪೌಲನು, ಸೀಲನನ್ನು ಆರಿಸಿಕೊಂಡಿದ್ದನ್ನು ನಂತರ ತಿಳಿಸಿರುವರು (15:40). ಅವನು ನಂತರ ಹಿಂತಿರುಗಿರಬಹುದು, ಅವರಿಗಾಗಿ ಪೌಲನು ಯೆರೂಸಲೇಮಿಗೆ ಕಳುಹಿಸಿರಬಹುದು. [32]Rick Atchley, “The Concessions Stand,” Sermon preached at the Southern Hills church of Christ, Abilene, Texas, on 20 April 1986.

## ಅಪೊಸ್ತಲರ ಕೃತ್ಯಗಳು 15:20, 29 ರಲ್ಲಿರುವ ನಿಷೇದಾಜ್ಞೆಗಳು, ನಮಗೆ ಅನ್ವಹಿಸುತ್ತವೆಯೇ?

ಅಪೊಸ್ತಲರ ಕೃತ್ಯಗಳು 15:20 ಮತ್ತು 29ರಲ್ಲಿರುವ ನಿಷೇದಾಜ್ಞೆಗಳು, ಆದಿ ಸಭೆಯಲ್ಲಿ, ಎಷ್ಟರ ಮಟ್ಟಿಗೆ ಆಚರಣೆಯಲ್ಲಿತ್ತು ಎಂಬುದನ್ನು ಪಂಡಿತರುಗಳು ಒಪ್ಪಿಕೊಳ್ಳು ವದಿಲ್ಲ. ಕೆಲವರು (ಅವರನ್ನು “ಒಂದನೇ ಭಾಗದವರೆಂದು” ನಾನು ಕರೆದಿರುವೆನು), ಈ ನಿಷೇಧಾಜ್ಞೆಗಳು ಸಂದರ್ಭಕ್ಕನುಗುಣವಾಗಿತ್ತು ಎಂದು ಹೇಳುವರು. ಇತರರು (ಎರಡನೇಯವರು) ಆ ನಿಷೇಧಾಜ್ಞೆಗಳು ಸಾರ್ವತ್ರಿಕವಾಗಿದ್ದು, ಅದನ್ನು ಈ ದಿನಗಳಲ್ಲೂ ಆಚರಿಸಬೇಕು ಎಂದು ಹೇಳುವರು.

2ನೇಯ ಕಡೆಯವರು 15:28ರಂತೆ “ಅದು ಅಗತ್ಯ” ಎಂದು ಹೇಳುವರು (ಅಗತ್ಯ

ಸಂಗತಿ; KJV) ಆದರೆ 1ನೇ ಕಡೆಯವರು, "ಯೆಹೂದ್ಯ ಮತ್ತು ಅನ್ಯರ ಅನ್ಯೋನ್ಯತೆಗೆ" ಮಾತ್ರ ಸಂಬಂಧಪಟ್ಟದ್ದು ಎಂದು ಹೇಳುವರು. "ಅದು ರಕ್ಷಣೆಗೆ ಅಗತ್ಯವಲ್ಲ" 2 ನೇಯವರು, "ಅದನ್ನು ಪರಿಶುದ್ಧಾತ್ಮನು," ಅಪೊಸ್ತಲರ ಕೃತ್ಯದಲ್ಲಿ ತಿಳಿಸಿರುವದರಿಂದ, ಅದು ನಮಗೆ ಮಾರ್ಗದರ್ಶನವಾಗಿದೆ ಎಂದು ಹೇಳುವರು; ಆದರೆ 1ನೇಯವರು, ಇದರ ಅಗತ್ಯವಿಲ್ಲ ಎಂದು ಹೇಳುವರು. (1) ಅದು ಪ್ರಮುಖವಾದ, ಇತಿಹಾಸದ ದಾಖಲೆಯಾಗಿರುವದರಿಂದ (2) ಸಮಸ್ಯೆಗಳನ್ನು ಪರಿಹರಿಸುವ ಕ್ರಮದ ಉದ್ದೇಶದಿಂದ ಅದನ್ನು ತಿಳಿಸಲಾಗಿದೆ ಎಂದು 1ನೇ ಯವರು ಹೇಳುವರು.

ಈ ಪತ್ರಿಕೆಯ ಒಂದು ಸೀಮಿತ ಗುಂಪಿಗೆ ಬರೆಯಲಾಗಿದೆ (15:23), ಆದರೆ 1ನೇ ಯವರ ಅಭಿಪ್ರಾಯವಾಗಿದ್ದರೆ, 2ನೇಯವರು, ಅದನ್ನು ಮುಂದುವರಿಸಬೇಕು ಎಂದು ಒತ್ತಿ ಹೇಳುತ್ತಾರೆ ಮತ್ತು ಪೌಲನ ಪ್ರತಿ ಪತ್ರಿಕೆಯು ನಿರ್ದಿಷ್ಟವಾದ ಗುಂಪಿಗೆ ಬರೆಯಲಾಗಿದೆ (ರೋಮಾಪುರ 1:7; 1 ಕೊರಿಂಥ 1:2). ಆದರೂ ಅದರ ನಿಯಮಗಳು ನಮಗೆ ಅನ್ವಹಿಸುತ್ತದೆ ಎನ್ನುವರು. 1ನೇಯವರು ಕೇಳುವಂತೆ, ಅಪೊಸ್ತಲರ ಕೃತ್ಯಗಳು 15ರ ಪತ್ರಿಕೆಯು ಸಾರ್ವತ್ರಿಕವಾಗಿದ್ದಲ್ಲಿ, ಗಲಾತ್ಯ ಪತ್ರಿಕೆಯನ್ನು ಬರೆಯುವಾಗ ಪೌಲನು ಏಕೆ ಯೆರುಸಲೇಮಿನವರ ಈ ತತ್ವವನ್ನು ಚರ್ಚಿಸಲಿಲ್ಲ; ಕ್ರೈಸ್ತರಾದ ಅನ್ಯಜನರಿಗೆ ಸುನ್ನತಿ ಮಾಡಿಸುವ ಕುರಿತಾಗಲೀ? ವಿಗ್ರಹಕ್ಕೆ ನೈವೇದ್ಯ ಮಾಡಿದ ಆಹಾರ ಕುರಿತಾಗಿಯು ಅದನ್ನು ಪೌಲನು ಆಯ್ಕೆಗೆ ಒಳಪಡಿಸಿದನೇ? ಇದಕ್ಕೆ 2ನೇಯವರು ಪ್ರತಿಕ್ರಿಯಿಸಿ, "ಮೂಲ ಅಪೊಸ್ತಲರು ಈ ಕುರಿತು ಪೌಲನಿಗೆ ಯಾವುದೇ ನಿರ್ದೇಶನವನ್ನು ನೀಡುವದಿಲ್ಲ" (ಗಲಾತ್ಯ 2:6). ಅದು ಮೂಲ ಅಪೊಸ್ತಲರ ಆಡಳಿತಕ್ಕೆ ತದ್ವಿರುದ್ಧವಾಗಿರುವ ಸಂಗತಿಯಾಗಿದೆ, ಕೊರಿಂಥದವರಿಗೆ, ಬರೆಯುವಾಗ, ವಿಗ್ರಹಕ್ಕೆ ನೈವೇದ್ಯ ಮಾಡಿರುವ ಆಹಾರವನ್ನು ಸೇವಿಸುವದು ಕ್ರೈಸ್ತರ ಹಕ್ಕು ಎಂದು ಹೇಳಿದ್ದರೂ, ಇತರರಿಗೆ ಅಡ್ಡಿಯಾಗದ ಕಾರಣಕ್ಕೆ ಅದನ್ನು ಭುಜಿಸಬಾರದು, ಅದು ವಿಗ್ರಹಕ್ಕೆ ಸಮರ್ಪಿಸಿದ್ದು ಎಂದು ತಿಳಿದು ಬಂದಾಗ ಅದನ್ನು ಭುಜಿಸಬಾರದು (1 ಕೊರಿಂಥ 10:23-33). ಇನ್ನೊಂದು ಅರ್ಥದಲ್ಲಿ ಅಪೊಸ್ತಲರ ಕೃತ್ಯಗಳು 15ರ ಮೂಲ ನಿಯಮವನ್ನೇ ಪೌಲನು ಪಾಲಿಸಿದನು: ಇತರರಿಗೋಸ್ಕರವಾಗಿ, ವಿಗ್ರಹಕ್ಕೆ ಸಮರ್ಪಿಸಿದನ್ನು ತಿನ್ನಬಾರದು.

ಹೊಸ ಒಡಂಬಡಿಕೆಯ ಅನೇಕ ಪಾಠಗಳು, ವಿಗ್ರಹಕ್ಕೆ ನೈವೇದ್ಯ ಮಾಡಿರುವದನ್ನು ತಿನ್ನಬಾರದು ಮತ್ತು ಹಾದರ ಮಾಡಬಾರದೆಂದು ತಿಳಿಸುತ್ತದೆ (1 ಥೆಸಲೋನಿಕ 4:3, 5; 1 ಕೊರಿಂಥ 10:19-21; ಪ್ರಕಟಣೆ 2:14, 20). ರಕ್ತವನ್ನು ತಿನ್ನುವ ಕುಡಿಯುವ ವಿಷಯದಲ್ಲಿ ನಿಷೇದದ ಸುತ್ತಲು ವಾದಗಳು ಉಂಟಾಗಿವೆ, ಹೊಸ ಒಡಂಬಡಿಕೆಯು ಇತರೆ ವಾಕ್ಯಗಳಲ್ಲಿ ಅದನ್ನು ತಿಳಿಸಿರುವದಿಲ್ಲ. "ಭಿನ್ನಾಭಿಪ್ರಾಯಗಳನ್ನು ಪರಿಹರಿಸುವ" ಪಾಠದಲ್ಲಿ, ಮೋಶೆಯ ನೇಮಗಳನ್ನು ಹೊಂದುವ ಮೊದಲೇ, ಈ ವಿಷಯಗಳನ್ನು ನಿಷೇಧಿಸಲಾಗಿತ್ತು (ಆದಿಕಾಂಡ 9:4). ಹಾಗೂ, ಯೆಹೂದ್ಯರ ನಿಯಮದಲ್ಲೂ ಇರಲಿಲ್ಲ (ಯಾಜಕಕಾಂಡ 17:8-16), ಅನಾರೋಗ್ಯವು ಉಂಟಾಗಬಹುದೆಂಬ ಕಾರಣದಿಂದ, ಹಾಗೂ ಪ್ರಾಯೋಗಿಕ ಕಾರಣದಿಂದಲೂ, ದೈವಶಾಸ್ತ್ರವು ಅದನ್ನು ನಿಷೇದಿಸಿದೆ.

ನೇಮಗಳನ್ನು ಹೊಂದುವ ಮೊದಲೇ, ಈ ವಿಷಯಗಳನ್ನು ನಿಷೇದಿಸಿದ್ದರಿಂದ ಅದು ದೇವರು ಬಯಸುವ ಸಮಾನ ವಿಧಿಯೆಂದು ಪರಿಗಣಿಸಲಾಗುವದು. ಆದ್ದರಿಂದ ನಾನು ರಕ್ತವನ್ನು ಕುಡಿಯುವುದಾಗಲೀ ಭುಜಿಸುವುದಾಗಲೀ ಮಾಡುವದಿಲ್ಲ. ಆ ಅಂಶವನ್ನು ತೀವ್ರವಾಗಿಯೂ ಹೇಳುವದಿಲ್ಲ. "ಪ್ರತಿಯೊಬ್ಬನು ತನ್ನ ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರಬೇಕು" (ರೋಮಾಪುರ 14:5ಬಿ).

ರಕ್ತದ ಮತ್ತು ವಿಗ್ರಹಕ್ಕೆ ನೈವೇದ್ಯವಾದ ಆಹಾರವನ್ನು ತೆಗೆದುಕೊಳ್ಳಬಾರದೆಂಬ ನಿಷೇಧಗಳು, ಆ ಕಾಲದಲ್ಲೂ ಇರುವದರಿಂದ, ರಕ್ತ ಬದಲಾವಣೆಯನ್ನು ಯೆಹೋವನ ಸಾಕ್ಷಿಗಳು ಹೇಳುವಂತೆ ನಿಷೇದಮಾಡಿರುವದಿಲ್ಲ.